ಶ್ರೀ ಆರಗ ಜ್ಞಾನೇಂದ್ರ: ಅಪರಾಧಿಗಳನ್ನು ನಾವು ಹಿಡಿದುಕೊಡುವುದಿಲ್ಲ, ಹಾಗಾದರೆ ಅವರೇಕೆ ಇರುವುದು? ಅವರಿಗೆ ಇಷ್ಟೊಂದು ಸಂಬಳ ಕೊಟ್ಟು ತನಿಖೆ ಮಾಡುವುದಾದರೂ ಏಕೆ?

ಅಧ್ಯಕ್ಷರು : ಅವರ ಇಲಾಖೆ ತರಹ ನಿಮಗೂ ಏನಾದರೂ ಗೊತ್ತಿರುತ್ತದೆಂದು ಅವರು ನಮ್ಮನ್ನು ಕೇಳುವುದು.

ಶ್ರೀ ಆರಗ ಜ್ಞಾನೇಂದ್ರ : ಅವರು ಇನ್‌ವೆಸ್ಟಿಗೇಷನ್ ಮಾಡುವುದಿಲ್ಲ, ಇದರ ಬಗ್ಗೆ ನಾವು ಪದೇ ಪದೇ ಇನ್‌ಫ್ಲುಯೆನ್ಸ್ ಮಾಡುವಂಥ ಅವಶ್ಯಕತೆ ಬರಬಾರದು. ನಮ್ಮ ಮಲೆನಾಡಿನಂಥ ತಾಲ್ಲೂಕುಗಳಲ್ಲಿ ಒಂದೊಂದು ಮನೆ ಇರುವಂಥ ಪ್ರದೇಶಗಳಲ್ಲಿ ಇಂತಹ ಪ್ರಕರಣಗಳಾದಾಗ ಪೋಲೀಸರು ಅಪರಾಧಿಗಳನ್ನು ಪತ್ತೆ ಹಚ್ಚಿ ಹಿಡಿದು ಅವರನ್ನು ಪ್ರಶ್ನಿಸಿ ಭಯಪಡಿಸಿದರೆ ಅಲ್ಲಿ ಅಂತಹ ಪ್ರಕರಣಗಳು ಮರುಕಳಿಸುವುದಿಲ್ಲ. ಬಹುಶಃ ಸಿಂಧ್ಯರವರು ಹೊಸದಾಗಿ ಗೃಹ ಖಾತೆಯನ್ನು ವಹಿಸಿಕೊಂಡಿರುವುದರ ಬಗ್ಗೆ ನಿಮ್ಮ ಪೋಲೀಸ್ ಅಧಿಕಾರಿಗಳಿಗೆ ಗೊತ್ತಾಗಿಲ್ಲವೇ? ಆದುದರಿಂದ, ಇದರ ಬಗ್ಗೆ ಸರಿಯಾದ ರೀತಿಯಲ್ಲಿ ಸೂಚನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್ ಸಿಂಧ್ಯ : ಮಾನ್ಯ ಸದಸ್ಯರು ತಮ್ಮ ಕ್ಷೇತ್ರದಲ್ಲಿ ನಡೆದಿರುವ ಘಟನೆಗಳ ಬಗ್ಗೆ ನಿಯಮ 351ರಡಿ ಪ್ರಸ್ತಾಪಿಸಿದ್ದು ಆದಕ್ಕೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಆದರೂ ಸಹ ಈ ದಿಶೆಯಲ್ಲಿ ನಾನು ಭರವಸೆ ಕೊಡುವುದೇನೆಂದರೆ, ಸ್ಟೇಷನ್ ಹೌಸ್ ಆಫೀಸರ್ಸ್ ಯಾರಿದ್ದಾರೆ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ಸ್ ಯಾರಿದ್ದಾರೆ, ಅವರುಗಳು ಈ ಬಗ್ಗೆ ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ಈ ಸದನದ ಮುಖಾಂತರ ಹೇಳಿದ್ದೇನಲ್ಲದೆ ಮತ್ತೊಮ್ಮೆ ಅದನ್ನು ಪುನರುಚ್ಚಿಸಬಯಸುತ್ತೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರಗಳು ಮುಗಿಯಿತು.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಸಿ. ಬೈರೇಗೌಡ (ಕೃಷಿ ಹಾಗೂ ತೋಟಗಾರಿಕೆ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 23.3.1999ರಂದು ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ 10ನೇ ಪಟ್ಟಿಯಲ್ಲಿರುವ 114 ಪ್ರಶ್ನೆಗಳ ಪೈಕಿ 96 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆ ಮುಂದೆ ಮಂಡಿಸುತ್ತಿದ್ದೇನೆ.

ಹುಬ್ಬಳ್ಳಿ ನಗರದಲ್ಲಿ ಹೊಸ ಪಡಿತರ ಚೀಟಿ ವಿತರಣೆ.

640 (705) ಶ್ರೀ ಅಶೋಕ ಶಂಕರ್ ಕಾಟ್ವೆ (ಹುಬ್ಬಳ್ಳಿ ನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರದಲ್ಲಿ ಹೊಸ ಪಡಿತರ ಚೀಟಿ ಕೋರಿ ಇಲ್ಲಿಯವರಿಗೆ ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ; ಹಾಗೂ ಎಷ್ಟು ಪಡಿತರ ಚೀಟಿಗಳನ್ನುನೀಡಲಾಗಿದೆ ಹಾಗೂ ಬಾಕಿ ಇರುವ ಅರ್ಜಿದಾರರಿಗೆ ಯಾವಾಗ ನೀಡಲಾಗುವುದು;

ಆ) ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; ಇವುಗಳನ್ನು ಯಾವಾಗ ಇತ್ಯರ್ಥ ಪಡಿಸಲಾಗುವುದು;

ಇ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು;

ಈ)ಪಡಿತರ ಚೀಟಿ ಪೂರೈಸುವಲ್ಲಿ ಭ್ರಷ್ಟಾಚಾರ ನಡೆದಿರುವುದು ಸರ್ಕಾರವರ ಗಮನಕ್ಕೆ ಬಂದಿದೆಯೇ?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ)	ಫೋಟೋ ಪಡಿತರ ಚೀಟಿ	17540
	ಹಸಿರು ಕಾರ್ಡ್	518
	ಒಟ್ಟು	18058

ಪಡಿತರ ಚೀಟಿ ವಿತರಿಸಿದ್ದು

ಫೋಟೋ ಪಡಿತರ ಚೀಟಿ	7595
ಹಸಿರು ಪಡಿತರ ಚೀಟಿ	418
ಒಟ್ಟು	8013

3370 ಫೋಟೋ ಪಡಿತರ ಚೀಟಿ ಕೋರಿ ಅರ್ಜಿಗಳು ಹಾಗೂ 100 ಹಸಿರು ಪಡಿತರ ಚೀಟಿ ಕೋರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಉಳಿದ ಅರ್ಜಿದಾರರಿಗೆ ಅರ್ಜಿಗಳನ್ನು ಪರಿಶೀಲಿಸಿ ನಂತರ ಪಡಿತರ ಚೀಟಿಗಳನ್ನು ದಿನಾಂಕ 31.3.99ರೊಳಗಾಗಿ ವಿತರಿಸಲು ಕ್ರಮ ವಹಿಸಲಾಗುವುದು.

ಆ) 3240 ಅರ್ಜಿಗಳನ್ನು ಈಗಾಗಲೇ ಪರಿಶೀಲಿಸಲಾಗಿದ್ದು ಇವರುಗಳು ಪಡಿತರ ಚೀಟಿಯನ್ನು ಪಡೆಯಲು ಅರ್ಹರೆಂದು ಕಂಡು ಬಂದಿದ್ದು ಪಡಿತರ ಚೀಟಿ ವಿತರಣೆ ಆಗಬೇಕಿದೆ. 3335 ಅರ್ಜಿಗಳು ಇನ್ನು ಪರಿಶೀಲಿಸಬೇಕಿದ್ದು ಪರಿಶೀಲನಾ ಕೆಲಸ ಪ್ರಗತಿಯಲ್ಲಿದೆ.

ಇ) ಕಾರ್ಯಕಾರಿ ಸಿಬ್ಬಂದಿಗಳಿಂದ ಅರ್ಜಿಗಳ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದೆ. ಈ ಕೆಲಸ ಪೂರ್ಣ ಗೊಂಡ ನಂತರ ಅರ್ಹರಿಗೆ ಪಡಿತರ ಚೀಟಿಯನ್ನು ನೀಡಲಾಗುವುದು.

ಈ) -ಇಲ್ಲ-

ಹುಬ್ಬಳ್ಳಿ -ಧಾರವಾಡ ಮಹಾನಗರದಲ್ಲಿ ಭಾಗ್ಯಜ್ಯೋತಿ ಯೋಜನೆ

641(713) ಶ್ರೀ ಅಶೋಕ ಶಂಕರ್ ಕಾಟ್ವೆ (ಹುಬ್ಬಳ್ಳಿನಗರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ)ಕಳೆದ 5 ವರ್ಷಗಳಲ್ಲಿ ಹುಬ್ಬಳ್ಳಿ-ಧಾರವಾಡ ಮಹಾ ನಗರದಲ್ಲಿ ಭಾಗ್ಯ ಜ್ಯೋತಿ ಅಡಿಯಲ್ಲಿ ಸಾಧಿಸಿದ ಪ್ರಗತಿ ಎಷ್ಟು? (ವಿಭಾಗವಾರು ವಿವರ ಒದಗಿಸುವುದು)

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ)ಮಂಡಳಿಯು ಸರ್ಕಾರದ ಸಾಮಾಜಿಕಅಭಿವೃದ್ಧಿ ಕಾರ್ಯಕ್ರಮದ ಅನುಸಾರ ರಾಜ್ಯದ ಗ್ರಾಮೀಣ ಪ್ರದೇಶಗಳ ಮಾತ್ರ ಭಾಗ್ಯಜ್ಯೋತಿ ಯೋಜನೆಯನ್ನು ಗೊಳಿಸಲಾಗುತ್ತಿದೆ. ಪಟ್ಟಣ